**All India Radio: Bangalore**
**National Bulletin In Kannada**
**18.08.2026 07.35 a.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**18.08.2026 07.35 a.m.**

***************

ಮುಖ್ಯಾಂಶಗಳು

೧. ಅಭ್ಯರ್ಥಿಗಳ ೨೪ ದಿನಗಳ ಸುದೀರ್ಘ ಪ್ರತಿಭಟನೆಗೆ ಮಣಿದ ಝಾರ್ಖಂಡ್ ಸರ್ಕಾರ; ಜೆಎಸ್ಎಸ್‌ಸಿ-ಸಿಜಿಎಲ್ ಪರೀಕ್ಷೆ ರದ್ದು, ಸಿಐಡಿ ತನಿಖೆಗೆ ಆದೇಶ

೨. ಭಾರತದ ಆತಿಥ್ಯದಲ್ಲಿ 'ಬ್ರಿಕ್ಸ್ ಯುವ ಮಂಡಳಿ ಸಭೆ' ಮತ್ತು 'ಬ್ರಿಕ್ಸ್ ಯುವ ಶೃಂಗಸಭೆ : ಗುಜರಾತ್‌ನ ಗಾಂಧಿನಗರದಲ್ಲಿ ನಾಳೆಯಿಂದ ಆಯೋಜನೆ

೩. ದೇಶದಲ್ಲಿ ನಿರುದ್ಯೋಗ ಪ್ರಮಾಣ ದರ ಜುಲೈನಲ್ಲಿ ಶೇಕಡ ೫.೧ಕ್ಕೆ ಇಳಿಕೆ; ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಮಾಹಿತಿ

೪. ಬಿಡಬ್ಲ್ಯೂಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್; ಹಾಲಿ ವಿಶ್ವಚಾಂಪಿಯನ್ ಚೀನಾದ ಶಿ ಯು ಕಿ ವಿರುದ್ಧ ಭಾರತದ ಆಯುಷ್ ಶೆಟ್ಟಿಗೆ ಗೆಲುವು

೫. ಭಾರತ-ಶ್ರೀಲಂಕಾ ಟೆಸ್ಟ್ ಕ್ರಿಕೆಟ್: ಭಾರತಕ್ಕೆ ೧೭೮ ರನ್‌ಗಳ ಬೃಹತ್ ಮುನ್ನಡೆ

***************

ಝಾರ್ಖಂಡ್ ಸರ್ಕಾರಿ ಉದ್ಯೋಗಾಕಾಂಕ್ಷಿಗಳ ೨೪ ದಿನಗಳ ಸುದೀರ್ಘ ಪ್ರತಿಭಟನೆಯ ಫಲವಾಗಿ ೨೦೨೪ರ 'ಜೆಎಸ್ಎಸ್‌ಸಿ-ಸಿಜಿಎಲ್' ಸ್ಪರ್ಧಾತ್ಮಕ ಪರೀಕ್ಷೆ ಸೇರಿದಂತೆ ಟಿಡಿಪಿಎಲ್ ಏಜೆನ್ಸಿ ಮುಖಾಂತರ ನಡೆಸಲಾದ ಎಲ್ಲಾ ಪರೀಕ್ಷೆಗಳು ಹಾಗೂ ಅವುಗಳ ಫಲಿತಾಂಶಗಳನ್ನು ಝಾರ್ಖಂಡ್ ಸರ್ಕಾರ ಸಂಪೂರ್ಣವಾಗಿ ರದ್ದುಗೊಳಿಸಿದೆ.

ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಚಿವ ಸಂಪುಟ ಸಭೆಯ ಬಳಿಕ ಈ ನಿರ್ಧಾರ ಕೈಗೊಳ್ಳಲಾಗಿದೆ. ಇದರ ಜೊತೆಗೆ, ೨೦೧೪ ರಿಂದ ಜೇಪಿಎಸ್‌ಸಿ

ಮತ್ತು ಜೆಎಸ್‌ಎಸ್‌ಸಿ ನಡೆಸಿರುವ ಎಲ್ಲಾ ನೇಮಕಾತಿ ಪರೀಕ್ಷೆಗಳ ಅಕ್ರಮಗಳ ಕುರಿತು ಸಿಐಡಿ ಮೂಲಕ ಸಮಗ್ರ ತನಿಖೆ ನಡೆಸಲು ಸರ್ಕಾರ ಆದೇಶಿಸಿದೆ.

ಆದರೂ ಈ ರದ್ದತಿಯ ನಿರ್ಧಾರ, ಪ್ರತಿಭಟನಾಕಾರರ ಮೊದಲ ಹಂತದ ಜಯವಷ್ಟೇ ಎಂದು ವಿದ್ಯಾರ್ಥಿ ಮುಖಂಡ ಪಿಯೂಷ್ ಕುಮಾರ್ ತಿಳಿಸಿದ್ದಾರೆ. ೧೧ ರಿಂದ ೧೩ ನೇ ಜೆಪಿಎಸ್‌ಸಿ ಪರೀಕ್ಷೆಗಳ ಅಕ್ರಮಗಳು ಹಾಗೂ ಈ ಎಲ್ಲಾ ಪರೀಕ್ಷಾ ಹಗರಣಗಳ ಕುರಿತು ಸಿಬಿಐ ತನಿಖೆಗೆ ಆಗ್ರಹಿಸಿರುವ ತಮ್ಮ ಪ್ರಮುಖ ಬೇಡಿಕೆಗಳು ಇನ್ನು ಈಡೇರಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ, ಮುಂದಿನ ಹಂತದ ಹೋರಾಟ ಮತ್ತು ಕಾರ್ಯತಂತ್ರಗಳ ಕುರಿತು ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ಪ್ರತಿಭಟನಾನಿರತ ವಿದ್ಯಾರ್ಥಿಗಳು ತಿಳಿಸಿದ್ದಾರೆ.

***************

ಭಾರತದ ಬ್ರಿಕ್ಸ್ ಅಧ್ಯಕ್ಷತೆಯ ಅಡಿಯಲ್ಲಿ, ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ 'ಬ್ರಿಕ್ಸ್ ಯುವ ಮಂಡಳಿ ಸಭೆ' ಮತ್ತು 'ಬ್ರಿಕ್ಸ್ ಯುವ ಶೃಂಗಸಭೆ'ಯನ್ನು ಗುಜರಾತ್‌ನ ಗಾಂಧಿನಗರದಲ್ಲಿ ನಾಳೆಯಿಂದ ಎರಡು ದಿನಗಳ ಕಾಲ ಆಯೋಜಿಸಲಿದೆ.

ಈ ಯುವ ಶೃಂಗಸಭೆಯು ಬ್ರಿಕ್ಸ್ ಸದಸ್ಯ ಮತ್ತು ಪಾಲುದಾರ ರಾಷ್ಟ್ರಗಳ ಯುವ ನಾಯಕರು, ಸಂಶೋಧಕರು, ಉದ್ಯಮಿಗಳು ಹಾಗೂ ಬದಲಾವಣೆಯ ಹರಿಕಾರರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಲಿದೆ. ವೈವಿಧ್ಯಮಯ ವಿಷಯಾಧಾರಿತ ಚರ್ಚೆಗಳು ಮತ್ತು ಸಂವಾದಗಳ ಮೂಲಕ ಯುವಜನರು ತಮ್ಮ ಆಲೋಚನೆಗಳನ್ನು ವಿನಿಮಯ ಮಾಡಿಕೊಳ್ಳಲು ಹಾಗೂ ಬ್ರಿಕ್ಸ್ ಚೌಕಟ್ಟಿನಲ್ಲಿ ಪರಿಗಣಿಸಬಹುದಾದ ಪರಿಹಾರಗಳನ್ನು ಪ್ರಸ್ತುತಪಡಿಸಲು ಇದು ಉತ್ತಮ ವೇದಿಕೆ ಕಲ್ಪಿಸಲಿದೆ.

ಇದರ ಮುಂದುವರಿದ ಭಾಗವಾಗಿ, ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ ಇದೇ ೨೨ ರಂದು ಆಂಧ್ರಪ್ರದೇಶದ ವಿಶಾಖಪಟ್ಟಣಂನಲ್ಲಿ 'ಬ್ರಿಕ್ಸ್ ಯುವ ಸಚಿವರ ಸಭೆ'ಯನ್ನು ಆಯೋಜಿಸಲಿದೆ. ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಯುವ ವ್ಯವಹಾರಗಳ ಸಚಿವರು ಮತ್ತು ನಿಯೋಗದ ಮುಖ್ಯಸ್ಥರು ಭಾಗವಹಿಸುವ ಈ ಸಭೆಯಲ್ಲಿ, ಯುವಜನರ ಅಭಿವೃದ್ಧಿಯ ಪ್ರಮುಖ ಆದ್ಯತೆಗಳ ಕುರಿತು ಚರ್ಚಿಸಲಾಗುವುದು. ಜೊತೆಗೆ ಯುವ ಶೃಂಗಸಭೆಯ ಫಲಿತಾಂಶಗಳನ್ನು ಪರಾಮರ್ಶಿಸಿ 'ಯುವ ಸಹಕಾರ ಕುರಿತ ಜಂಟಿ ಸಚಿವರ ಪ್ರಕಟಣೆ'ಯನ್ನು ಅಂಗೀಕರಿಸಲಾಗುವುದು.

***************

ಸ್ವಾತಂತ್ರ್ಯ ದಿನದ ಮುನ್ನವೇ, ದೇಶದ ರಕ್ಷಣಾ ಪಡೆಗಳು ಐಎಸ್ಐ ಬೆಂಬಲಿತ ಉಗ್ರಗಾಮಿ ಗುಂಪು- ಶಹಜಾದ್ ಭಟ್ಟಿ ಕಾರ್ಯಜಾಲವನ್ನು ಧ್ವಂಸಗೊಳಿಸಿವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

೨೦೦ಕ್ಕೂ ಅಧಿಕ ಕಾರ್ಯನಿರ್ವಾಹಕರನ್ನು ವಶಕ್ಕೆ ಪಡೆಯುವ ಮೂಲಕ ಸರ್ಕಾರ ವಿಚ್ಛಿದ್ರಕಾರಿ ಆಕ್ರಮಣವನ್ನು ವಿಫಲಗೊಳಿಸಲಾಗಿದೆ ಎಂದು ಗೃಹ ಸಚಿವರು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ನೀಡಿದ್ದಾರೆ.

ಭದ್ರತಾ ಪಡೆಗಳು ೧೪ ರಾಜ್ಯಗಳ ವಿವಿಧ ತಾಣಗಳಲ್ಲಿ ಸಮನ್ವಯದ ಕಾರ್ಯಾಚರಣೆ ನಡೆಸುವ ಮೂಲಕ ಭಯೋತ್ಪಾದಕತೆ ವಿರುದ್ಧ ಶೂನ್ಯ ಸಹನೆಯನ್ನು ಅತ್ಯುತ್ತಮವಾಗಿ ಪ್ರದರ್ಶಿಸಿದ್ದಾರೆ. ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ಐಇಡಿ, ಪಾಕಿಸ್ತಾನ ಶಸ್ತ್ರಾಸ್ತ್ರ ಕಾರ್ಖಾನೆಗಳ ಗುರುತು ಇರುವ ಗ್ರೆನೇಡ್, ಪಿಸ್ತೂಲ್, ಸಜೀವ ಕಾಟ್ರಿಜ್, ಸಿಸಿ ಟಿವಿ ಕ್ಯಾಮರಾ ಮೊದಲಾದವುಗಳನ್ನು ವಶಪಡಿಸಿಕೊಳ್ಳಲಾಗಿದೆ. ಶಹಜಾದ್ ಭಟ್ಟಿ ಕಾರ್ಯಜಾಲ ವಿವಿಧ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿತ್ತು ಎಂದು ಅಮಿತ್ ಶಾ ತಿಳಿಸಿದ್ದಾರೆ.

***************

ಮಾಜಿ ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರ ಹಿಂದಿ ಜೀವನಚರಿತ್ರೆಯನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಹಾಗೂ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ನಿನ್ನೆ ನವದೆಹಲಿಯಲ್ಲಿ ಬಿಡುಗಡೆ ಮಾಡಿದರು.

ಮಾಜಿ ರಾಜ್ಯಸಭಾ ಸದಸ್ಯ ವೈ. ಲಕ್ಷ್ಮೀ ಪ್ರಸಾದ್ ರಚಿಸಿರುವ ಈ ಕೃತಿ, ವೆಂಕಯ್ಯ ನಾಯ್ಡು ಅವರ ಸಾರ್ವಜನಿಕ ಜೀವನ, ಹೋರಾಟ, ರಾಷ್ಟ್ರ ಸೇವೆ ಹಾಗೂ ಕೊಡುಗೆಗಳನ್ನು ಪರಿಚಯಿಸುತ್ತದೆ.

ಈ ಜೀವನಚರಿತ್ರೆ ಓದುಗರಿಗೆ ಸ್ಫೂರ್ತಿ ನೀಡಲಿದೆ ಎಂದು ರಾಜನಾಥ್ ಸಿಂಗ್ ಹೇಳಿದ್ದಾರೆ.

***************

ಮಂಗೋಲಿಯಾದ ಉಲಾನ್‌ಬಾಟರ್‌ನಲ್ಲಿ ನಡೆಯುತ್ತಿರುವ ವಿಶ್ವಸಂಸ್ಥೆಯ ಮರುಭೂಮೀಕರಣ ತಡೆ ಸಮಾವೇಶದ ೧೭ನೇ ಅಧಿವೇಶನ-ಕಾಪ್೧೭ರಲ್ಲಿ ಭಾರತ ಹುಲ್ಲುಗಾವಲುಗಳು ಮತ್ತು

ಇತರ ಮುಕ್ತ ನೈಸರ್ಗಿಕ ಪರಿಸರ ವ್ಯವಸ್ಥೆಗಳ ಕುರಿತ ತನ್ನ ಮೊದಲ ಮಾರ್ಗದರ್ಶಿಯನ್ನು ಬಿಡುಗಡೆ ಮಾಡಿದೆ.

ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಮಾತನಾಡಿ, ಅರಣ್ಯಗಳ ಜೊತೆಗೆ ಹುಲ್ಲುಗಾವಲುಗಳು ಮತ್ತು ಇತರ ನೈಸರ್ಗಿಕ ಪರಿಸರ ವ್ಯವಸ್ಥೆಗಳ ವೈಜ್ಞಾನಿಕ ಸಂರಕ್ಷಣೆ ಅಗತ್ಯ ಎಂದು ಹೇಳಿದರು. ಜೀವವೈವಿಧ್ಯತೆ, ಜೀವನೋಪಾಯ ಮತ್ತು ಹವಾಮಾನ ಸ್ಥಿತಿಸ್ಥಾಪಕತ್ವಕ್ಕೆ ಆರೋಗ್ಯಕರ ಹುಲ್ಲುಗಾವಲುಗಳು ಅತ್ಯಂತ ಮಹತ್ವದ್ದಾಗಿವೆ ಎಂದು ಅವರು ತಿಳಿಸಿದರು.

ಭಾರತದ ಪ್ರಮುಖ ಮುಕ್ತ ನೈಸರ್ಗಿಕ ಪರಿಸರ ವ್ಯವಸ್ಥೆಗಳ ಪರಿಸರ ಗುಣಲಕ್ಷಣಗಳು, ಜೀವವೈವಿಧ್ಯತೆ ಹಾಗೂ ಅವುಗಳೊಂದಿಗೆ ಸಂಬಂಧ ಹೊಂದಿರುವ ಸಮುದಾಯಗಳ ಕುರಿತು ಮಾರ್ಗದರ್ಶಿಯಲ್ಲಿ ಮಾಹಿತಿ ನೀಡಲಾಗಿದೆ.

***************

ದೇಶದಲ್ಲಿ ೧೫ ವರ್ಷ ಹಾಗೂ ಅದಕ್ಕಿಂತ ಹೆಚ್ಚಿನ ವಯಸ್ಸಿನವರ ನಿರುದ್ಯೋಗ ಪ್ರಮಾಣ ಜುಲೈನಲ್ಲಿ ಶೇಕಡ ೫.೧ಕ್ಕೆ ಇಳಿದಿದೆ. ಜೂನ್‌ನಲ್ಲಿ ಇದು ಶೇಕಡ ೫.೫ರಷ್ಟಿತ್ತು ಎಂದು ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಮಾಸಿಕ ಕಾರ್ಮಿಕ ಬಲ ಹಾಗೂ ನಿರುದ್ಯೋಗ ದತ್ತಾಂಶ ತಿಳಿಸಿದೆ.

ಗ್ರಾಮೀಣ ಪ್ರದೇಶದ ನಿರುದ್ಯೋಗ ಪ್ರಮಾಣ ಜೂನ್‌ನ ಶೇಕಡ ೫ ರಿಂದ ಜುಲೈನಲ್ಲಿ ಶೇಕಡ ೪.೫ಕ್ಕೆ ಇಳಿದಿದೆ. ನಗರ ಪ್ರದೇಶದಲ್ಲಿ ಮಾತ್ರ ನಿರುದ್ಯೋಗ ಪ್ರಮಾಣ ಶೇಕಡ ೬.೮ರಿಂದ ಶೇಕಡ ೭.೭ಕ್ಕೆ ಕೊಂಚ ಏರಿಕೆಯಾಗಿದೆ.

ಮಹಿಳೆಯರ ಒಟ್ಟಾರೆ ನಿರುದ್ಯೋಗ ಪ್ರಮಾಣ ಶೇಕಡ ೫.೪ಕ್ಕೆ ಇಳಿದಿದ್ದು, ಪುರುಷರ ನಿರುದ್ಯೋಗ ಪ್ರಮಾಣ ಶೇ. ೫ಕ್ಕೆ ಇಳಿಕೆಯಾಗಿದೆ.

***************

ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ಎದುರಿಸುತ್ತಿರುವ ವಿದೇಶಿ ಪ್ರಜೆಗಳಿಗೆ ಜಾಮೀನು ನೀಡುವಾಗ ಕಠಿಣ ಷರತ್ತುಗಳನ್ನು ವಿಧಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ.

ಜಾಮೀನು ಪಡೆಯುವವರು ಪಾಸ್‌ಪೋರ್ಟ್‌ಗಳನ್ನು ನ್ಯಾಯಾಲಯಕ್ಕೆ ಒಪ್ಪಿಸಿ, ಪೂರ್ವಾನುಮತಿ ಇಲ್ಲದೆ ದೇಶ ತೊರೆಯುವಂತಿಲ್ಲ ಎಂದು ತಿಳಿಸಿದೆ. ಬಿಡುಗಡೆಯಾದ ಒಂದು ವಾರದೊಳಗೆ ಎಫ್‌ಆರ್‌ಆರ್‌ಒನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಇಬ್ಬರು ಖಾತರಿದಾರರನ್ನು ಒದಗಿಸಬೇಕು ಎಂದು ನ್ಯಾಯಾಲಯ ತಿಳಿಸಿದೆ.

ನಕಲಿ ಖಾತರಿದಾರರನ್ನು ಪತ್ತೆಹಚ್ಚಲು ಕೇಂದ್ರೀಯ ದತ್ತಾಂಶ ವ್ಯವಸ್ಥೆ ರೂಪಿಸುವಂತೆಯೂ ನಿರ್ದೇಶನ ನೀಡಿದೆ.

**************

ನವದೆಹಲಿಯ ಇಂದಿರಾ ಗಾಂಧಿ ಕ್ರೀಡಾಂಗಣದಲ್ಲಿ ಆರಂಭವಾಗಿರುವ ಬಿಡಬ್ಲ್ಯೂಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್-೨೦೨೬ರ ಮೊದಲ ದಿನದ ಪಂದ್ಯಗಳಲ್ಲಿ ಭಾರತೀಯ ಆಟಗಾರರು ಶುಭಾರಂಭ ಮಾಡಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಆಯುಷ್ ಶೆಟ್ಟಿ, ಹಾಲಿ ವಿಶ್ವ ಚಾಂಪಿಯನ್ ಹಾಗೂ ವಿಶ್ವದ ಅಗ್ರ ಶ್ರೇಯಾಂಕಿತ ಆಟಗಾರ ಚೀನಾದ ಶಿ ಯು ಕಿ ಅವರನ್ನು ೨೧-೧೪, ೧೩-೨೧, ೨೧-೧೯ ಸೆಟ್‌ಗಳಿಂದ ಮಣಿಸಿ ಎರಡನೇ ಸುತ್ತಿಗೆ ಪ್ರವೇಶಿಸಿದ್ದಾರೆ. ಮಹಿಳೆಯರ ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧು ಐರ್ಲೆಂಡ್‌ನ ಸೋಫಿಯಾ ನೋಬಲ್ ವಿರುದ್ಧ ೨೧-೭, ೨೧-೧೧ ಅಂತರದಿಂದ ಜಯ ಸಾಧಿಸಿದ್ದಾರೆ.

ಮಹಿಳೆಯರ ಡಬಲ್ಸ್‌ನಲ್ಲಿ ತ್ರಿಶಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ಸ್ಪೇನ್‌ನ ಪೌಲಾ ಲೋಪೆಜ್ ಹಾಗೂ ಲೂಸಿಯಾ ರೋಡ್ರಿಗಸ್ ಜೋಡಿಯನ್ನು ೨೧-೯, ೨೧-೧೩ ರಿಂದ ಸೋಲಿಸಿದ್ದರೆ, ಕವಿಪ್ರಿಯಾ ಸೆಲ್ವಂ ಮತ್ತು ಸಿಮ್ರನ್ ಸಿಂಘಿ ಜೋಡಿ ೨೨-೨೦, ೨೧-೧೪ ರಿಂದ ಸ್ಪೇನ್‌ನ ನಿಕೋಲ್ ಕರುಲ್ಲಾ ಹಾಗೂ ಕಾರ್ಮೆನ್ ಜಿಮೆನೆಜ್ ಜೋಡಿಯನ್ನು ಮಣಿಸಿದೆ.

ಪುರುಷರ ಡಬಲ್ಸ್‌ನಲ್ಲಿ ಎಂ.ಆರ್. ಅರ್ಜುನ್ ಮತ್ತು ಹರಿಹರನ್ ಅಮ್ಸಕರುಣನ್ ಜೋಡಿ ತಮ್ಮ ಪಂದ್ಯದಲ್ಲಿ ಮುನ್ನಡೆಯಲ್ಲಿದ್ದಾಗ, ಎದುರಾಳಿ ಐರ್ಲೆಂಡ್ ಜೋಡಿ ಗಾಯದಿಂದ ಪಂದ್ಯದಿಂದ ಹೊರನಡೆದ ಹಿನ್ನೆಲೆ ಭಾರತೀಯ ಜೋಡಿ ಮುಂದಿನ ಸುತ್ತಿಗೆ ಅರ್ಹತೆ ಪಡೆದಿದೆ.

ಇಂದು ನಡೆಯಲಿರುವ ಪಂದ್ಯಗಳಲ್ಲಿ ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ ಹಾಗೂ ಮಹಿಳೆಯರ ಸಿಂಗಲ್ಸ್‌ನಲ್ಲಿ ಉನ್ನತಿ ಹೂಡಾ ಕಣಕ್ಕಿಳಿಯಲಿದ್ದಾರೆ.

***************

ಶ್ರೀಲಂಕಾದ ಗಾಲೆ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಶ್ರೀಲಂಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ೩ನೇ ದಿನದಾಟದ ಅಂತ್ಯಕ್ಕೆ ಭಾರತ ೧೭೮ ರನ್‌ಗಳ ಬೃಹತ್ ಮುನ್ನಡೆ ಸಾಧಿಸಿದ್ದು, ಪಂದ್ಯದ ಮೇಲಿನ ತನ್ನ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸಿದೆ.

ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೪೬೨ ರನ್‌ಗಳಿಸಿದ್ದ ಭಾರತದ ಮೊತ್ತಕ್ಕೆ ಉತ್ತರವಾಗಿ ಬ್ಯಾಟಿಂಗ್ ನಡೆಸಿದ ಶ್ರೀಲಂಕಾ ಪಡೆ ೨೮೪ ರನ್‌ಗಳಿಗೆ ತನ್ನೆಲ್ಲ ವಿಕೆಟ್ ಕಳೆದುಕೊಂಡಿತು. ಭಾರತದ ಪರ ಸ್ಪಿನ್ನರ್ ಮಾನವ್ ಸುತಾರ್ ೪ ವಿಕೆಟ್ ಪಡೆದರೆ, ರವೀಂದ್ರ ಜಡೇಜಾ ೩ ವಿಕೆಟ್ ಕಬಳಿಸಿದರು. ಶ್ರೀಲಂಕಾ ಪರ ಸೋನಾಲ್ ದಿನುಷಾ ಚೊಚ್ಚಲ ಟೆಸ್ಟ್ ಶತಕ ಗಳಿಸಿದರೆ, ನಿರೋಷನ್ ಡಿಕ್ವೆಲ್ಲಾ ೮೦ ರನ್ ಗಳಿಸಿದರು.

೪ನೇ ದಿನವಾದ ಇಂದು ಭಾರತ ತನ್ನ ಮುನ್ನಡೆಯನ್ನು ಮತ್ತಷ್ಟು ವಿಸ್ತರಿಸಿ ಎದುರಾಳಿ ತಂಡಕ್ಕೆ ಸವಾಲಿನ ಗುರಿ ಪ್ರಯತ್ನಿಸಲಿದೆ. ಸರಣಿಯ ಎರಡನೇ ಹಾಗೂ ಅಂತಿಮ ಟೆಸ್ಟ್ ಪಂದ್ಯವು ಇದೇ ೨೩ ರಿಂದ ಕೊಲಂಬೋದಲ್ಲಿ ಆರಂಭವಾಗಲಿದೆ.

******* ಮುಕ್ತಾಯ *******